# ಜಿಲ್ಲಾ ಪಂಚಾಯತ್ ರಾಯಚೂರು.

ಸಂ:ಜಿಪರಾ/ಶಿಕ್ಷಣ.ಯೋ/ಶಾಆಮ್ಯೆ/ಶಾ.ಕಪೌಂಡ/2007-08 ದಿನಾಂಕ:8-1-2008.

## ಆದೇಶ.

ವಿಷಯ: 2006-07 ನೇ ಸಾಲಿನ **ಪ್ರಾಥಮಿಕ ಶಾಲೆಗಳ ಆಟದ ಮೈದಾನ ಅಭಿವೃದ್ಧಿ ಹಾಗೂ ಕಂಪೌಂಡ್ ಗೋಡೆ** ನಿರ್ಮಾಣ ಕಾಮಗಾರಿಗಳಿಗಾಗಿ ಸಲ್ಲಿಸಿದ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:1)ಸರ್ಕಾರದ ಆದೇಶ ಸಂ:ಇಡಿ/ಯೋಯೋಕ/2006ಬೆಂಗಳೂರು ದಿ:24.6.2006.
2)ಮಾನ್ಯ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಜ್ಞಾಪನ ಸಂ:ಯೋ/8/ಕೆ3/ಪ್ರೌಶಾಆಮ್ಯೆ/ಅಕಾಂನಿ/39/2006-07 ದಿ:11.9.2006.
3)ದಿನಾಂಕ:8.12.2006 ರ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳ ಕ್ರ.ಸಂ.(3) ರನ್ವಯ.
4)ಉಪ ನಿರ್ದೇಶಕರು, ಸಾ.ಶಿ.ಇ.ರಾಯಚೂರು ಇವರ ಪತ್ರ ಸಂ:ಯೋವಿ:ಪ್ರಾಶಾಲೆ ಅಭಿವೃದ್ಧಿ/06-07 ದಿ:27.4.2007.
5)ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ ರಾಯಚೂರು ಇವರ ಪತ್ರ ಸಂ: ಕಾನಿಅ/ಜಿಪಂಇಂ/ರಾವಿ/2869 , ದಿನಾಂಕ:13.12.2007.

-*-

ಉಲ್ಲೇಖ (1) ಮತ್ತು (2) ರ ಮೂಲಕ 2006-07 ನೇ ಸಾಲಿನಲ್ಲಿ **"ಪಂಚ ಸೌಲಭ್ಯ"** ಯೋಜನೆಯ **ಲೆಕ್ಕ ಶೀರ್ಷಿಕೆ:2202-01-800-1-73-059** ರಡಿಯಲ್ಲಿ, ರಾಯಚೂರು ಜಿಲ್ಲೆಗೆ 12 ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಆಟದ ಮೈದಾನಗಳ ಅಭಿವೃದ್ಧಿಗಾಗಿ 23 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಪೌಂಡ್ ಗೋಡೆಗಳ ನಿರ್ಮಾಣಕ್ಕಾಗಿ, ಕ್ರಮವಾಗಿ ರೂ.12.00 ಲಕ್ಷ ಮತ್ತು ರೂ.11.50 ಲಕ್ಷ ಅನುದಾನವನ್ನು ಕಲ್ಪಿಸಿರುತ್ತಾರೆ.

ಉಲ್ಲೇಖ (3) ರ ದಿನಾಂಕ:8-12-2006 ರ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳ ಪ್ರಕಾರ ಕ್ರ.ಸಂ.(3) ರ ಅನುಮೋದನೆಯಂತೆ, ಮತ್ತು ಉಲ್ಲೇಖ (4) ರ ಪ್ರಕಾರ , ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರಾಯಚೂರು ಇವರಿಗೆ ಅನುದಾನವನ್ನು ಬಿಡುಗಡೆಗೊಳಿಸಿಲಾಗಿದೆ.ಆದರೆ ಕಾರ್ಯನಿರ್ವಾಹಕ ಅಭಿಯಂತರರು, ಇದುವರೆಗೆ ಅಂದಾಜು ಪತ್ರಿಕೆಗಳನ್ನು ಸಲ್ಲಿಸಿದ ಬಗ್ಗೆ ದಿನಾಂಕ:21-8-2007 ರ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಚರ್ಚಿಯಾದ ನಂತರ ಈಗ ಸಲ್ಲಿಸಿರುತ್ತಾರೆ.

ಉಲ್ಲೇಖ (5) ರ ಮೂಲಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರಾಯಚೂರು ಇವರು ಈ ಕೆಳಕಾಣಿಸಿದ ಪ್ರಕಾರ ಅಂದಾಜು ಪತ್ರಿಕೆಗಳನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿದ್ದು, ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತುಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

..2)ಕ್ಕೆ

ರೂ.ಲಕ್ಷಗಳಲ್ಲಿ.

| ಕ್ರ. ಸಂ | ಕಾಮಗಾರಿ ವಿವರಗಳು | ಗ್ರಾಮ | ಅಂದಾಜು ಮತ್ತು | 2006-07ನೇ ಸಾಲಿಗೆ ಒದಗಿಸಿದ ಅನುದಾನ |
|---|---|---|---|---|
| 1 | ಸಿಂಧನೂರು ತಾಲೂಕಿನ ಜವಳಗೇರಾ ಗ್ರಾಮದ ಸ.ಹಿ.ಪ್ರಾ. ಶಾಲೆಗೆ ಆಟದ ಮೈದಾನದ ಅಭಿವೃದ್ಧಿ. | ಜವಳಗೇರಾ | 1.00 | 1.00 |
| 2 | ಸಿಂಧನೂರು ತಾಲೂಕಿನ ಮಲ್ಕಾಪುರ ಗ್ರಾಮದ ಸ.ಹಿ.ಪ್ರ.ಶಾ.ಆಟದ ಮೈದಾನ ಅಭಿವೃದ್ಧಿ. | ಮಲ್ಕಾಪುರ | 1.00 | 1.00 |
| 3 | ಸಿಂಧನೂರು ತಾಲೂಕಿನ ಕೋಳಬಾಳ್ ಗ್ರಾಮದ ಸ.ಹಿ.ಪ್ರಾ.ಶಾ. ಆಟದ ಮೈದಾನ ಅಭಿವೃದ್ಧಿ. | ಕೋಳಬಾಳ್ | 1.00 | 1.00 |
| 4 | ಸಿಂಧನೂರು ತಾಲೂಕಿನ ತುರ್ವಿಹಾಳ ಗ್ರಾಮದ ಸ.ಹಿ.ಪ್ರಾ.ಶಾಲೆ ಕಂಪೌಂಡ್ ನಿರ್ಮಾಣ | ತುರ್ವಿಹಾಳ | 0.50 | 0.50 |
| 5 | ಸಿಂಧನೂರು ತಾಲೂಕಿನ ಹೊಸಳ್ಳಿ ಕ್ಯಾಂಪ್ E.J. ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ. | ಹೊಸಳ್ಳಿ ಕ್ಯಾಂಪ್ (E.J) | 0.50 | 0.50 |
| 6 | ಸಿಂಧನೂರು ತಾಲೂಕಿನ ತಿಡಿಗೋಳ ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ | ತಿಡಿಗೋಳ | 0.50 | 0.50 |
| 7 | ಸಿಂಧನೂರು ತಾಲೂಕಿನ R.H. ಕ್ಯಾಂಪ್ 4 ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ | R.H. ಕ್ಯಾಂಪ್ No.4 | 0.50 | 0.50 |
| 8 | ಸಿಂಧನೂರು ತಾಲೂಕಿನ ಉದ್ಬಾಳ (ಯು) ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ | ಉದ್ಬಾಳ | 0.50 | 0.50 |
| 9 | ಲಿಂಗಸೂಗೂರು ತಾಲೂಕಿನ ನಾಗರಬೆಂಚಿ ಗ್ರಾಮದ ಸ.ಪ್ರೌ.ಶಾಲಾ ಆಟದ ಮೈದಾನ ಅಭಿವೃದ್ಧಿ. | ನಾಗರಬೆಂಚಿ. | 1.00 | 1.00 |
| 10 | ಲಿಂಗಸೂಗೂರು ತಾಲೂಕಿನ ಅಡವಿಭಾವಿ ಸ.ಹಿ.ಪ್ರಾ.ಶಾಲಾ. ಆಟದ ಮೈದಾನ ಅಭಿವೃದ್ಧಿ. | ಅಡವಿಭಾವಿ | 1.00 | 1.00 |
| 11 | ಲಿಂಗಸೂಗೂರು ತಾಲೂಕಿನ ರೋಡಲಬಂಡ (UKP) ಸ.ಹಿ.ಪ್ರಾ.ಶಾಲಾ. ಕಂಪೌಂಡ ನಿರ್ಮಾಣ | ರೋಡಲಬಂಡ | 0.50 | 0.50 |
| 12 | ಲಿಂಗಸೂಗೂರು ತಾಲೂಕಿನ ತವಗಾ ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡ ಗೋಡೆ ನಿರ್ಮಾಣ. | ತವಗಾ | 0.50 | 0.50 |
| 13 | ಲಿಂಗಸೂಗೂರು ತಾಲೂಕಿನ ಗುಂತಗೋಳ ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ | ಗುಂತಗೋಳ | 0.50 | 0.50 |
| 14 | ಮಾನವಿ ತಾಲೂಕಿನ ಕುರ್ಡಿ G.H.P.ಶಾಲಾ ಆಟದ ಮೈದಾನ ಅಭಿವೃದ್ಧಿ. | ಕುರ್ಡಿ | 1.00 | 1.00 |
| 15 | ಮಾನವಿ ತಾಲೂಕಿನ ಮಲ್ಲದಗುಡ್ಡ G.H.P.ಶಾಲಾ ಆಟದ ಮೈದಾನ ಅಭಿವೃದ್ಧಿ . | ಮಲ್ಲದಗುಡ್ಡ | 1.00 | 1.00 |
| 16 | ಮಾನವಿ ತಾಲೂಕಿನ ಸಿಂಗಡದಿನ್ನಿ ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡು ನಿರ್ಮಾಣ. | ಸಿಂಗಡದಿನ್ನಿ | 0.50 | 0.50 |
| 17 | ಮಾನವಿ ತಾಲೂಕಿನ ದದ್ದಲ ಆಶ್ರಯ ಕಾಲೋನಿ ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ. | ದದ್ದಲ | 0.50 | 0.50 |
| 18 | ರಾಯಚೂರು ತಾಲೂಕಿನ ಯಾಪಲದಿನ್ನಿ ಗ್ರಾಮದ ಸ.ಹಿ.ಪ್ರಾ.ಶಾಲಾ ಕಂಪೌಡ ನಿರ್ಮಾಣ. | ಯಾಪಲದಿನ್ನಿ | 0.50 | 0.50 |
| 19 | ರಾಯಚೂರು ತಾಲೂಕಿನ ವಿಜಯ ನಗರ ಕ್ಯಾಂಪನ ಸ.ಹಿ.ಪ್ರಾ.ಶಾಲಾ ಕಂಪೌಂಡ ನಿರ್ಮಾಣ | ವಿಜಯನಗರ ಕ್ಯಾಂಪ್ | 0.50 | 0.50 |
| 20 | ಗುಂಜಹಳ್ಳಿ ಗ್ರಾಮದ K.M.ಕಲೋನಿ ಸ.ಪ್ರಾ.ಶಾಲಾ ಕಂಪೌಂಡ್ ನಿರ್ಮಾಣ. | ಗುಂಜಹಳ್ಳಿ | 0.50 | 0.50 |

..3)ಕ್ಕೆ

**ಷರತ್ತುಗಳು:**

1.ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯ Update ಮಾಡಲು ಕಾಮಗಾರಿಗಳನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ.

2.ಕಾಮಗಾರಿ ಅನುಷ್ಠಾನ ಮತ್ತು ಆರ್ಥಿಕ/ಭೌತಿಕ/ಪ್ರಗತಿ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಮಾಹಿತಿ ಒದಗಿಸುವುದು.

3.ವೆಚ್ಚವನ್ನು ಸಂಬಂಧಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು,

4.ಸದರಿ ಕಾಮಗಾರಿಗಳು ತೃಪ್ತಿಕರವಾಗಿ ಮುಗಿದ ಬಗ್ಗೆ ಸಂಬಂಧಿಸಿದ ಶಾಲೆಯ ಮುಖ್ಯ ಗುರುಗಳು ಹಾಗೂ S.D.M.C. ಅಧ್ಯಕ್ಷರಿಂದ ಧೃಡೀಕರಣ ಪಡೆದ ನಂತರವೇ ಹಣ ಪಾವತಿಸುವುದು.

**(ಎಸ್. ಅನೀಸ್ ಸಿರಾಜ್)**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್ ರಾಯಚೂರು.

**ಪ್ರತಿಯನ್ನು:**

1)ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಆಪ್ತ ಶಾಖೆಗೆ.

2)ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರುಇವರ ಮಾಹಿತಿಗಾಗಿ.

3)ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂ.ವಿಭಾಗ ರಾಯಚೂರು ಇವರಿಗೆ ಅನುಮೋದಿತ ಅಂದಾಜು ಪತ್ರಿಕೆಗಳೊಂದಿಗೆ ಸೂಕ್ತಕ್ರಮಕ್ಕಾಗಿ.

4)ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ್, ಸಿಂಧನೂರು/ಲಿಂಗಸೂಗೂರು /ಮಾನವಿ/ರಾಯಚೂರು ಇವರಿಗೆ ಮಾಹಿತಿಗಾಗಿ

5)ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂ.ಉಪ ವಿಭಾಗ ಸಿಂಧನೂರು/ಲಿಂಗಸೂಗೂರು/ಮಾನವಿ/ರಾಯಚೂರು ಇವರ ಮಾಹಿತಿಗಾಗಿ.

6)ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಂಧನೂರು/ಲಿಂಗಸೂಗೂರು/ಮಾನವಿ/ರಾಯಚೂರು ಇವರ ಮಾಹಿತಿಗಾಗಿ

7)ಅಧ್ಯಕ್ಷರು ಎಸ್.ಡಿ.ಎಮ್.ಸಿ. _____________________ತಾ:____________ ಇವರಿಗೆ ಮಾಹಿತಿಗಾಗಿ.

8)ಜಿಲ್ಲಾ ಪಂಚಾಯತ್ ಸೂಚನಾ ಫಲಕಕ್ಕೆ.

9.ಕಛೇರಿ ಪ್ರತಿ.